SEPTEMBER 14, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಆಕಾಶವಾಣಿಯ, ನಮ್ಮ ಆತ್ಮೀಯ ಕೇಳುಗರಿಗೆಲ್ಲ, ಗೌರಿ ಹಾಗೂ ಗಣೇಶ ಹಬ್ಬದ, ಹಾರ್ದಿಕ ಶುಭಾಶಯಗಳು..**

<><><>

**ಮುಖ್ಯಾಂಶಗಳು:**

<><><>

- **‘ಸಮಗ್ರ ಶಿಕ್ಷಣ ಕರ್ನಾಟಕ’; ‘ಗ್ರಾಮಾನುಭವ’ಕ್ಕೆ,** 8 ರಿಂದ 11ನೇ ತರಗತಿಯ, 2 ಲಕ್ಷ 15 ಸಾವಿರದ 577 ವಿದ್ಯಾರ್ಥಿಗಳು, ಆಯ್ಕೆ.
- **“ಕರ್ನಾಟಕ ಕೌಶಲ್ಯ ಒಲಿಂಪಿಕ್ಸ್”;** ಹೆಸರು ನೋಂದಾಯಿಸಲು, ನಾಳೆ ಕೊನೆ ದಿನ.
- **ಗೌರವ,** ಘನತೆಯ ಬದುಕು; ಸಂವಿಧಾನದ ಆಶಯ – ರಾಜ್ಯಪಾಲ ಥಾವರಚಂದ ಗೆಹ್ಲೋಟ.
- ನಾಡಿನಾದ್ಯಂತ ಇಂದು, ಗೌರಿ–ಗಣೇಶ ಹಬ್ಬದ ಸಂಭ್ರಮ; ಗಣ್ಯರ ಶುಭಾಶಯ.

<><><>

**ಈಗ ವಾರ್ತೆಗಳ ವಿವರ**

<><><>

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ‘ಸಮಗ್ರ ಶಿಕ್ಷಣ ಕರ್ನಾಟಕ’ ಉಪಕ್ರಮದಡಿ, 8 ರಿಂದ 11ನೇ ತರಗತಿಯ, ರಾಜ್ಯದ 2 ಲಕ್ಷ 15 ಸಾವಿರದ 577 ಮಕ್ಕಳಿಗೆ, ‘ಗ್ರಾಮಾನುಭವ’ ಎಂಬ ವಿಶೇಷ ಕಾರ್ಯಕ್ರಮ, ಆಯೋಜಿಸಿದೆ.

<><><>

ಈ ಕುರಿತು, ಒಂದು ವರದಿ..

<><><>

*ಶಾಲಾ ಶಿಕ್ಷಣ ಮತ್ತು ಕಲಿಕಾ ಶ್ರೇಷ್ಠತೆ ಪ್ರಕಲ್ಪದಡಿ, ರಾಜ್ಯ ಸರ್ಕಾರ, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರ ಸಾರಥ್ಯದಲ್ಲಿ, 100 ದಿನಗಳ ಆಡಳಿತ ಪೂರ್ಣಗೊಳಿಸಿದ ಹಿನ್ನೆಲೆ, ಆಡಳಿತ, ಅಭಿವೃದ್ಧಿ ಮತ್ತು ಒಳಗೊಳ್ಳುವಿಕೆ ಕಾರ್ಯಸೂಚಿ ಭಾಗವಾಗಿ, ಶಾಲಾ ವಿದ್ಯಾರ್ಥಿಗಳಿಗೆ ಕ್ಷೇತ್ರ ಅಧ್ಯಯನ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ನೈಸರ್ಗಿಕ ಸಂಪನ್ಮೂಲ ಸಂರಕ್ಷಣಾ ಸಂಸ್ಥೆ ಕ್ರಮಗಳು, ರೈತ ಉತ್ಪಾದಕರ ಸಂಸ್ಥೆಗಳು, ಕೃಷಿ, ತೋಟಗಾರಿಕೆ, ಪಶುಪಾಲನೆ, ಮಣ್ಣು ಮತ್ತು ನೀರಿನ ಸಂರಕ್ಷಣಾ ಕ್ರಮಗಳ ಕುರಿತು, ಪ್ರಾಯೋಗಿಕ ಅನುಭವ ಪಡೆಯಲಿದ್ದಾರೆ. 58 ಪಿ.ಎಂ.ಶ್ರೀ. ಶಾಲೆಗಳು, 60 ಕೆ.ಪಿ.ಎಸ್. ಶಾಲೆಗಳು, 42 ಸರ್ಕಾರಿ ಶಾಲೆಗಳು, 39 ಅನುದಾನಿತ ಶಾಲೆಗಳು ಹಾಗೂ 732 ಅನುದಾನರಹಿತ ಶಾಲೆಗಳಿಂದ, ಮಕ್ಕಳನ್ನು ಆಯ್ದುಕೊಳ್ಳಲಾಗಿದೆ.*

<><><>

ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ, ಶಾಲಾ ಶಿಕ್ಷಣ ಇಲಾಖೆಯ, ಬೆಳಗಾವಿ ಜಿಲ್ಲೆಯ, ಆಡಳಿತ ಉಪ ನಿರ್ದೇಶಕಿ, ಲೀಲಾವತಿ ಹಿರೇಮಠ.

<><><>

ವಿವೇಕ (51)+ಲೀಲಾವತಿ ಹಿರೇಮಠ ಧ್ವನಿ (55) ಸೆಕೆಂದುಗಳು

<><><>

ಕೇಂದ್ರ ಹಾಗೂ ರಾಜ್ಯದ, ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ಮಂತ್ರಾಲಯಗಳು, ರಾಜ್ಯದ ಯುವಜನರ, ವೃತ್ತಿಪರ ಕೌಶಲ್ಯಗಳನ್ನು ಪ್ರದರ್ಶಿಸಲು, "ಕರ್ನಾಟಕ ಕೌಶಲ್ಯ ಒಲಂಪಿಕ್ಸ್" ಆಯೋಜಿಸಿದ್ದು, ಆಸಕ್ತರು, ಜಾಲತಾಣ ***www.skillindiadigital.gov.in*** ಮೂಲಕ, ನಾಳೆ ಒಳಗೆ, ಹೆಸರು ನೋಂದಾಯಿಸಬಹುದು. ಚೀನಾದ ಶಾಂಘೈನಲ್ಲಿ ಇದೇ ತಿಂಗಳು ಆಯೋಜಿತ, ವಿಶ್ವ ಕೌಶಲ್ಯ ಸ್ಪರ್ಧೆಯಲ್ಲಿ, ಕರ್ನಾಟಕದಿಂದ, 16 ಅಭ್ಯರ್ಥಿಗಳು ಭಾರತವನ್ನು ಪ್ರತಿನಿಧಿಸುತ್ತಿದ್ದಾರೆ. 2028ರ ವಿಶ್ವ ಕೌಶಲ್ಯ ಸ್ಪರ್ಧೆ, ಜಪಾನ್‌ನಲ್ಲಿ ನಡೆಯಲಿದ್ದು, ರಾಜ್ಯದ ಪ್ರತಿಭಾವಂತ ಯುವಜನರನ್ನು ಆಯ್ಕೆ ಮಾಡಲು, ಕೌಶಲ್ಯ ಒಲಿಂಪಿಕ್ಸ್ ಆಯೋಜಿಸಲಾಗಿದೆ.

<><><>

ಸೇವೆ, ಸಹಾನುಭೂತಿ, ಒಳಗೊಳ್ಳುವಿಕೆ ಮತ್ತು ಸ್ವಾವಲಂಬನೆಯ ಹೊಸ ಅಧ್ಯಾಯ, ಮಾತೃಶ್ರೀ ಮನೋವಿಕಾಸ ಚಿಕಿತ್ಸಾ ಕೇಂದ್ರದ, ನೂತನ ಕೇಂದ್ರದ ಉದ್ಘಾಟನೆಯಿಂದ ಆರಂಭವಾಗಿದೆ ಎಂದು, ರಾಜ್ಯಪಾಲ ಥಾವರಚಂದ ಗೆಹ್ಲೋಟ, ಶ್ಲಾಘಿಸಿದ್ದಾರೆ. ಬೆಂಗಳೂರಿನ, ನೆಲಮಂಗಲದ, ಗೌಡಹಳ್ಳಿಯಲ್ಲಿ ನೂತನ ಕೇಂದ್ರವನ್ನು ಉದ್ಘಾಟಿಸಿ, ಅವರು ಮಾತನಾಡಿದರು. ಪ್ರತಿಯೊಬ್ಬರೂ, ಗೌರವ ಮತ್ತು ಘನತೆಯಿಂದ, ಬದುಕಲು ಸಾಧ್ಯವಾಗುವಂತಹ ಸಮಾಜ ನಿರ್ಮಾಣವೇ, ಸಾಂವಿಧಾನಿಕ ಮೌಲ್ಯಗಳ ನಿಜವಾದ ಆಶಯ, ಎಂದರು. ಪದ್ಮಶ್ರೀ ಪುರಸ್ಕೃತ ಡಾಕ್ಟರ್ ಎಸ್.ಜಿ.ಸುಶೀಲಮ್ಮ, ಡಾಕ್ಟರ್ ಸುರೇಶ ಹನಗವಾಡಿ, ಮಾತೃಶ್ರೀ ಮನೋವಿಕಾಸ ಸಂಸ್ಥೆಯ, ಮಹಾ ಪೋಷಕ ಗೋಪಾಲ ಹೊಸೂರು, ಪಾಲ್ಗೊಂಡಿದ್ದರು.

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(37 ಸೆಕೆಂದುಗಳು)

<><><>

# ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ನಾಡಿನಾದ್ಯಂತ ಇಂದು, ಗೌರಿ–ಗಣೇಶ ಹಬ್ಬದ ಸಂಭ್ರಮ ಮನೆ ಮಾಡಿದೆ. ಭಾದ್ರಪದ ಮಾಸದ, ಶುಕ್ಲ ಪಕ್ಷದ, ಚತುರ್ಥಿಯಂದು, ಶ್ರದ್ಧಾಭಕ್ತಿ ಹಾಗೂ ಸಡಗರದಿಂದ, ಆಚರಿಸಲಾಗುತ್ತಿದೆ. ಮನೆಗಳಲ್ಲಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ, ಗಣೇಶ ವಿಗ್ರಹಗಳು ಪ್ರಾಣ ಪ್ರತಿಷ್ಠಾಪನೆಗೊಳ್ಳುತ್ತಿದ್ದು, ಇಂದಿನಿಂದ 11 ದಿನಗಳ ಕಾಲ, ಗಣೋಶೋತ್ಸವದ ಸಂಭ್ರಮಾಚರಣೆ. ಗೌರಿ, ಗಣೇಶ ಹಬ್ಬ, ಕುಟುಂಬ, ಸಂಸ್ಕೃತಿ, ಪ್ರಕೃತಿ ಮತ್ತು ಜ್ಞಾನವನ್ನು ಒಟ್ಟುಗೂಡಿಸುವ, ಭಾರತೀಯ ಪರಂಪರೆಯ, ಸುಂದರ ಅಭಿವ್ಯಕ್ತಿಯಾಗಿದೆ. ಶ್ರೀ ಗೌರಿಯನ್ನು, ಸೌಭಾಗ್ಯ, ಸಮೃದ್ಧಿ, ಶಕ್ತಿ ಮತ್ತು ಮಾತೃತ್ವದ ಸಂಕೇತವಾಗಿ ಆರಾಧಿಸಿದರೆ, ಶ್ರೀ ಗಣೇಶನನ್ನು, ವಿಘ್ನವಿನಾಶಕ, ಬುದ್ಧಿ, ವಿವೇಕ ಮತ್ತು ಶುಭಾರಂಭದ ಪ್ರತೀಕವಾಗಿ, ಪೂಜಿಸಲಾಗುತ್ತದೆ. ಗೌರಿ-ಗಣೇಶ ಆರಾಧನೆ, ಕುಟುಂಬದ ಒಗ್ಗಟ್ಟು, ಸ್ತ್ರೀಯರಿಗೆ ಗೌರವ, ಜ್ಞಾನ, ವಿವೇಕ, ಪ್ರಕೃತಿ ಪ್ರೀತಿ ಮತ್ತು ಸಾಮಾಜಿಕ ಸೌಹಾರ್ದದ, ಹಬ್ಬವೂ ಆಗಿದೆ.

<><><>

ನಾಡಿನ ಪ್ರಸಿದ್ಧ ದೇಗುಲಗಳಾದ, ಉತ್ತರಕನ್ನಡ ಜಿಲ್ಲೆ, ಇಡಗುಂಜಿಯ ಮಹಾಗಣಪತಿ ದೇವಸ್ಥಾನ, ಗೋಕರ್ಣದ ಮಹಾಬಲೇಶ್ವರ ಕ್ಷೇತ್ರದ ಗಣಪತಿ, ಉಡುಪಿಯ ಕುಂಭಾಶಿಯ ಆನೆಗುಡ್ಡೆ ಶ್ರೀ ವಿನಾಯಕ ದೇವಸ್ಥಾನ, ಮೈಸೂರಿನ ಕೌಶಿಕ ಗಣಪತಿ ಹಾಗೂ ಬೆಂಗಳೂರಿನ, ಬಸವನ ಗುಡಿಯ, ದೊಡ್ಡ ಗಣಪತಿ ದೇವಸ್ಥಾನಗಳಲ್ಲಿ, ವಿಶೇಷ ಪೂಜಾ ಕೈಂಕರ್ಯಗಳು, ಶಾಸ್ತ್ರೋಕ್ತ ವಿಧಿ–ವಿಧಾನಗಳು, ನಡೆಯುತ್ತಿವೆ.

<><><>

ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್, ಪ್ರಧಾನಮಂತ್ರಿ ನರೇಂದ್ರ ಮೋದಿ, ರಾಜ್ಯಪಾಲ ಥಾವರಚಂದ ಗೆಹ್ಲೋಟ, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಸೇರಿದಂತೆ, ನಾಡಿನ ಜನತೆಗೆ, ಅನೇಕ ಗಣ್ಯರು,

ಗೌರಿ–ಗಣೇಶ ಹಬ್ಬದ ಶುಭಾಶಯ ಕೋರಿದ್ದಾರೆ. ಸಮೃದ್ಧಿ ಹಾಗೂ ಸುಭಿಕ್ಷೆಗಾಗಿ ಪ್ರಾರ್ಥಿಸಿದ್ದಾರೆ. ಅರ್ಥಪೂರ್ಣವಾಗಿ, ಸುರಕ್ಷಿತ ಮತ್ತು ಪರಿಸರ ಸ್ನೇಹಿ ಹಬ್ಬದಾಚರಣೆಗೆ ತಮ್ಮ ಸಂದೇಶಗಳಲ್ಲಿ, ಜನತೆಗೆ ಮನವಿ ಮಾಡಿದ್ದಾರೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ, ಕರೆಯಿಂದ, ಪ್ರೇರಣೆ ಪಡೆದ, ಧಾರವಾಡದ ಅಡಕಿ ಓಣಿಯ, ಶ್ರೀ ಬಸವೇಶ್ವರ ಯುವಕ ಸಂಘ, ಈ ಬಾರಿಯ ಸಾರ್ವಜನಿಕ ಗಣೇಶೋತ್ಸವದಲ್ಲಿ, ಮೊಬೈಲ್ ವ್ಯಸನದಿಂದ, ಮಕ್ಕಳು ಹಾಗೂ ಯುವಜನತೆ ದೂರವಿರುವಂತೆ, ಜಾಗೃತಿ ಮೂಡಿಸಲು, 'ಮೊಬೈಲ್ ಬಿಡಿರಿ; ಪುಸ್ತಕ ಹಿಡಿಯಿರಿ' ಎಂಬ, ಮಾದರಿ ಆಂದೋಲನ ರೂಪಿಸಿದೆ. ಪುಸ್ತಕ ಸಂಸ್ಕೃತಿ ಪರಿಚಾರಿಕೆ ಧ್ಯೇಯದೊಂದಿಗೆ, ಸಾರ್ವಜನಿಕ ಗಣೇಶೋತ್ಸವದ ರೂವಾರಿ, ಬಾಲಗಂಗಾಧರ ತಿಲಕ ಅವರಿಗೆ, ಗೌರವ ಅರ್ಪಿಸುತ್ತಿದ್ದಾರೆ. ಯುವಕ ಮಂಡಳದ ವಿಶ್ವಸ್ಥ, ಉದಯ ಯಂಡಿಗೇರಿ, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

ಉದಯ ಯಂಡಿಗೇರಿ ಧ್ವನಿ 50 ಸೆಕೆಂದುಗಳು

<><><>

ಸಂಕ್ಷಿಪ್ತ ಸುದ್ದಿಗಳು:

<><><>

ಇಂದು, ರಾಷ್ಟ್ರ ಭಾಷೆ ಹಿಂದಿ ದಿನಾಚರಣೆ. 1949ರ ಸೆಪ್ಟೆಂಬರ್ 14 ರಂದು, ಸಂವಿಧಾನ ಸಭೆ, ದೇವನಾಗರಿ ಲಿಪಿಯ, ಹಿಂದಿ ಭಾಷೆಯನ್ನು, ರಾಷ್ಟ್ರೀಯ ಭಾಷೆಯಾಗಿ ಅಂಗೀಕರಿಸಿತು.

<><><>

ಮೈಸೂರು ದಸರಾ ಮಹೋತ್ಸವದ, ಜಂಬೂ ಸವಾರಿಯಲ್ಲಿ ಪಾಲ್ಗೊಳ್ಳಲು, ಎರಡನೇ ತಂಡದಲ್ಲಿ, ಮೂರು ಆನೆಗಳು, ಅರಮನೆಗೆ ಆಗಮಿಸಿವೆ.

<><><>

ಚಾಮರಾಜನಗರ ಜಿಲ್ಲೆಯಲ್ಲಿ, 7 ಬಾಲ ಕಾರ್ಮಿಕ ಮಕ್ಕಳನ್ನು ರಕ್ಷಿಸಲಾಗಿದೆ. ಮೂವರು  ಮಾಲಿಕರ ವಿರುದ್ಧ, ಪ್ರಕರಣ ದಾಖಲಿಸಲಾಗಿದೆ ಎಂದು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಎಂ.ಮುತ್ತುರಾಜ, ತಿಳಿಸಿದ್ದಾರೆ.

<><><>

ಉಡುಪಿ ನಗರದ, ಅಜ್ಜರಕಾಡು ಜಿಲ್ಲಾ ಕ್ರೀಡಾಂಗಣದಲ್ಲಿ, ತಾಲೂಕು ಮಟ್ಟದ ದಸರಾ ಕ್ರೀಡಾಕೂಟಕ್ಕೆ, ಉಡುಪಿ ಶಾಸಕ ಯಶಪಾಲ ಸುವರ್ಣ, ಚಾಲನೆ ನೀಡಿದರು.

<><><>

ವೈದ್ಯಕೀಯ ಶಿಕ್ಷಣ ಖಾತೆ ಸಚಿವ, ಡಾಕ್ಟರ್ ಶರಣಪ್ರಕಾಶ ಪಾಟೀಲ, ಗದಗ ಕೆ.ಎಚ್. ಪಾಟೀಲ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ, ಸೌರ ವಿದ್ಯುತ್ ಉತ್ಪಾದನಾ ಘಟಕ ಉದ್ಘಾಟಿಸಿದರು.

<><><>

ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ತಾಲೂಕು, ಗೌರಸಮುದ್ರ ಗ್ರಾಮದಲ್ಲಿ, ಶ್ರೀ ಮಾರಮ್ಮ ದೇವಿಯ ಜಾತ್ರಾ ಮಹೋತ್ಸವ, ಇಂದಿನಿಂದ ಮೂರು ದಿನಗಳ ಕಾಲ, ವಿಜೃಂಭಣೆಯಿಂದ ಜರುಗಲಿದೆ.

<><><>

ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ, ಕೇಂದ್ರ ಸರ್ಕಾರ, ಇ–ಕೆ.ವೈ.ಸಿ. ಕಡ್ಡಾಯಗೊಳಿಸಿದೆ. ಪಿ.ಎಂ.ಕಿಸಾನ್ ಮೊಬೈಲ್ ಅಪ್ಲಿಕೇಶನ್‌ನಲ್ಲಿ, ಸ್ವಯಂ ದೃಢೀಕರಣಕ್ಕೆ, ಅವಕಾಶವಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ‘ಸಮಗ್ರ ಶಿಕ್ಷಣ ಕರ್ನಾಟಕ’; ‘ಗ್ರಾಮಾನುಭವ’ಕ್ಕೆ, 8 ರಿಂದ 11ನೇ ತರಗತಿಯ, 2 ಲಕ್ಷ 15 ಸಾವಿರದ 577 ವಿದ್ಯಾರ್ಥಿಗಳು, ಆಯ್ಕೆ.
- “ಕರ್ನಾಟಕ ಕೌಶಲ್ಯ ಒಲಂಪಿಕ್ಸ್”; ಹೆಸರು ನೋಂದಾಯಿಸಲು, ನಾಳೆ ಕೊನೆ ದಿನ.
- ಗೌರವ, ಘನತೆಯ ಬದುಕು; ಸಂವಿಧಾನದ ಆಶಯ – ರಾಜ್ಯಪಾಲ ಥಾವರಚಂದ ಗೆಹ್ಲೋಟ.
- ನಾಡಿನಾದ್ಯಂತ ಇಂದು, ಗೌರಿ–ಗಣೇಶ ಹಬ್ಬದ ಸಂಭ್ರಮ; ಗಣ್ಯರ ಶುಭಾಶಯ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>